Mr. SPEAKER.—Till now we have not allowed any Question which is *subjudice* and which influences the court. Please do not put any question which influences the court.

ಶ್ರೀ ಎಸ್. ಶಿವಪ್ಪ.—ಆಹಾರ ಅಭಾವದಿಂದ ಆಹಾರ ಧಾನ್ಯ ದೊರೆಯದೇ ಇದ್ದ ಕಾರಣ ಕಂಗಾಲಾಗಿದ್ದ ಜನ ಸಹಸ್ರಾರು ಮೂಟೆ ಆಹಾರ ಧಾನ್ಯ ಲೂಟಿ ಮಾಡಿದರು ಎಂದು ಹೇಳಿದೆ. ಮಾರ್ಕೆಟ್ಟಿನಲ್ಲಿ ಆಹಾರ ಧಾನ್ಯ ಇಲ್ಲದೇ ಇರುವಾಗ್ಗೆ ಲೂಟಿ ಮಾಡುವುದಕ್ಕೆ ಸಹಸ್ರಾರು ಮೂಟೆ ಆಹಾರ ಧಾನ್ಯ ಎಲ್ಲಿಂದ ಬಂತು ?

ಶ್ರೀ ಎಂ. ವಿ. ಕೃಷ್ಣಪ್ಪ.—ಲೂಟಿ ಮಾಡುವುದಕ್ಕೆ ಹೋದ ಜನ ಇಸ್. ಎಸ್. ಪಿ. ಅವರು. ಅವರ ಜೊತೆಗೆ ಗುಂಡಾ ಜನರೂ ಸಹ ಸೇರಿಕೊಂಡರು. ಲೂಟಿಮಾಡುವುದಕ್ಕೆ ಯಾರು ಬಂದಿದ್ದರೊ ಅವರನ್ನು ಶಾಂತತಾ ಭಂಗ ಕಾರಣರೆಂದು ಹಿಡಿಯಬೇಕಾಗುತ್ತದೆ.

ಶ್ರೀ ಎಸ್. ಶಿವಪ್ಪ.—ಆಹಾರ ಅಭಾವದ ಮೂಲಕ ಆಹಾರ ಸಿಕ್ಕಲಿಲ್ಲ ಎಂದು ಜನ ಪ್ರದರ್ಶನ ಮಾಡುತ್ತಾ ತಮ್ಮ ಹಾದಿಯಲ್ಲಿ ಅವರು ಹೋದರೆ ಅವರ ಜೋತೆಗೆ ಗುಂಡಾ ಜನ ಸೇರಿಕೊಂಡು ಗುಂಡಾ ಜನ ಲೂಟಿ ಮಾಡಿದರು ಎಂದು ಹೇಳುವುದಾದರೆ ಜನರನ್ನು ಅರೆಸ್ಟ್ ಮಾಡುವುದಕ್ಕೆ ಕಾರಣವೇನು !

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಎಸ್.ಎಸ್.ಪಿ. ಮಾಡಿದ್ದು. ಪಿ.ಎಸ್.ಪಿ. ಅಲ್ಲ.

Mr. SPEAKER.—Order, Order.

ಶ್ರೀ ಬಿ. ವಿ. ಮಾಗಾವಿ.—ಹಾವೇರಿ ಊರಿನಲ್ಲಿ ಸಹ ಲೂಟಿ ನಡೆಯಿತು. ಅದರ ಬಗ್ಗೆ ಈ ಪ್ರಶ್ನೆಯಲ್ಲಿ ಏಕೆ ತಿಳಿಸಿಲ್ಲ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಾವೇರಿಯಲ್ಲಿ ಲೂಟಿ ನಡೆದ ಬಗ್ಗೆ ಸಮಾಚಾರ ಸರಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಆಹಾರ ಧಾನ್ಯ ಅಭಾವದಿಂದ ಜನ ರೊಚ್ಚಿಗೆದ್ದು ಲೂಟಿ ಮಾಡಿದ್ದಾರೆ. ಆಹಾರ ಧಾನ್ಯ ಬಚ್ಚಿಟ್ಟುಕೊಂಡು ಹೆಚ್ಚು ಹಣ ಸಂಪಾದನೆ ಮಾಡಬೇಕೆಂಬ ಒಂದು ವರ್ಗ ಇದೆ. ಆಹಾರ ಧಾನ್ಯ ಸಿಕ್ಕಲಿಲ್ಲ ಎಂದು ಲೂಟಿ ಮಾಡುವ ಇನ್ನೊಂದು ವರ್ಗ ಇದೆ. ಈ ಎರಡು ವರ್ಗದವರಲ್ಲಿ ಯಾರು ಹೆಚ್ಚಾಗಿ ಇದ್ದರು ?

ಅಧ್ಯಕ್ಷರು.—ಯಾರು ಹೆಚ್ಚು ಯಾರು ಕಡಮೆ ಎಂದು ಹೇಳುವುದಕ್ಕಾಗುವುದಿಲ್ಲ. ಇದು ಸಬ್ ಜುಡಿಸ್ ಇರುವುದರಿಂದ ಅಂಥ ಪ್ರಶ್ನೆ ಕೇಳುವುದು ಸರಿಯಲ್ಲ. Next Question may be taken up.

Reversion of B.D.O.s' and Deputy B.D.O.s' in several divisions

*Q.—673. Sri S. RUDRAPPA (Kalgi).—

Will the Government be pleased to state :—

the number of B.D.O,s' and Deputy B.D.O.s' who have been reverted to their original posts in (i) Mysore Division, (ii) Bangalore Division, (iii) Belgaum Division and (iv) Gulbarga Division on the recommendation of the Screening Committee ?

A.—Sri KONDAJJI BASAPPA (Deputy Minister for Co-operation).—9 as detailed below :—

Number reverted to original post

Division	*B.D.O's*	*Deputy B.D.O's*
Mysore	... 1	...
Bangalore	... 3	...
Belgaum	... ...	1
Gulbarga	... 2	2

ಶ್ರೀ ಎಸ್. ರುದ್ರಪ್ಪ.—ಸ್ಕ್ರೀನಿಂಗ್ ಸಮಿತಿಯವರ ಸಿಫಾರಸ್ಸಿನ ಮೇರೆಗೆ ಪೊಲೀಸ್ ಹುದ್ದೆಗೆ ವಾಪಸ್ಸು ಕಳುಹಿಸಿ ಕೊಡಲಾಗಿರುವ ಅಧಿಕಾರಿಗಳ ಬಗ್ಗೆ ಏನಾದರೂ ರೀ-ಕನ್ಸಿಡರ್ ಮಾಡುತ್ತೀರಾ ?

Sri KONDAJJI BASAPPA.—Such a representation is before the Government and it is being considered.

ಶ್ರೀ ಮಹಾಂತಸ್ವಾಮಿ.—ಗುಲ್ಬರ್ಗ ಸ್ಕ್ರೀನಿಂಗ್ ಕಮಿಟಿಯಲ್ಲಿ ಯಾರು ಇದ್ದಾರೆ ?

Sri KONDAJJI BASAPPA.—That consists of the Development Commissioner and Secretary to Government, Development and Panchayati Raj and Co-operation as the Chairman; Divisional Commissioner of the Division and three members *i.e.*, the Director of Agriculture, the D.C. of the District and the District Agriculture Officer. In the absence of the Secretary to Government and Development Commissioner, the Divisional Commissioner concerned will be the Chairman of the Committee.

ಶ್ರೀ ಮಹಂತಸ್ವಾಮಿ.—ಒಂಭತ್ತು ಜನ ಅಧಿಕಾರಿಗಳನ್ನು ವಾಪಸ್ ತೆಗೆದುಕೊಳ್ಳುವುದಕ್ಕಾಗಿ ಸ್ಕ್ರೀನಿಂಗ್ ಕಮಿಟಿಯವರು ವರದಿ ಕಳಿಸಿದ್ದಾರೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ವರದಿ ತೆಗೆದುಕೊಂಡು ಆಮೇಲೆ ಹಾಗೆ ತೀರ್ಮಾನ ತೆಗೆದು ಕೊಂಡಿದೆ.

ಶ್ರೀ ಸಿ. ಆಂ. ರಂಗೇಗೌಡ.—ಸ್ವಾಮಿ, ಬಿ.ಡಿ.ಓ. ಮತ್ತು ಡೆಪ್ಯುಟಿ ಬಿ.ಡಿ.ಓ. 3 ಜನ ರಿವರ್ಟ್ ಮಾಡಿದ್ದೀರಿ. ಅವರು ಒಂದೇ ಕೋಮಿಗೆ ಸೇರಿದವರಾಗಿದ್ದು ಅವರು ಹೊಸ ಮೈಸೂರು ಭಾಗದಿಂದ ಬಂದವರೇ ಎನ್ನುವುದನ್ನು ಪರಿಶೀಲಿಸುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಯಾವ ಜಾತಿಯವರು ಎನ್ನುವುದು ಹೆಸರಿನಮೇಲೆ ಗೊತ್ತಾಗು ವುದಿಲ್ಲ. ಯಾವ ಜಾತಿ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಅವರು ಸಮರ್ಪಕವಾಗಿ ಕೆಲಸ ಮಾಡುವುದಕ್ಕಾಗಿ ಏನೇನು ಸೌಲಭ್ಯ ಬೇಕೋ ಅವುಗಳನ್ನು ಕಲ್ಪಿಸಿದ್ದೀರಾ ಹೇಗೆ ?

ಶ್ರೀ ಕೊಂಡಜ್ಜಿ ಬಸಪ್ಪ.—ಕೆಲವು ಕಡೆ ಜೀಪ್ ಕೊಟ್ಟಿಲ್ಲ. ಕೆಲವು ಕಡೆ ಎಕ್ಸ್‌ಟೆನ್‌ಷನ್ ಆಫೀಸರ್‌ಗಳು ಸಾಕಷ್ಟು ಇಲ್ಲ. ಇದರ ಬಗ್ಗೆ ರೆಪ್ರಜೆಂಟೇಷನ್ಸ್ ಬಂದಿವೆ. ಅವುಗಳನ್ನು ಕನ್ಸಿಡರ್ ಮಾಡುತ್ತಾ ಇದ್ದೇವೆ.

ಶ್ರೀ ಎಂ. ಎನ್. ಕೃಷ್ಣಸಿಂಗ್.—ಪಬ್ಲಿಕ್ ಸರ್ವಿಸ್ ಕಮಿಷನ್ ನೇಮಕ ಮಾಡಿರುವ ಹಾಗೆ ಈ ಸ್ಕ್ರೀನಿಂಗ್ ಕಮಿಟಿಯನ್ನು ಕಾಯಂ ಆಗಿ ನೇಮಕ ಮಾಡುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಅವಶ್ಯಕವಾಗಿದೆ ಎಂದು ಕಂಡುಬಂದರೆ ಮಾಡಲಾಗುತ್ತದೆ.

ಶ್ರೀ ಬಿ. ಬೈರಪ್ಪಾಜಿ.—ಸರ್ಕಾರ ಈ 9 ಜನ ಕ್ಷೇತ್ರಾಧಿಕಾರಿಗಳನ್ನು ವಾಪಸ್ಸು ಕಳುಹಿಸು ವಾಗ ಯಾವ ಒಂದು ಆಧಾರವನ್ನು ಇಟ್ಟುಕೊಂಡು ವಾಪಸ್ಸು ಕಳುಹಿಸುತ್ತಾ ಇದೆ, ಅವರ ಭವಿಷ್ಯ ವೇನು, ಇವರ ಸ್ಥಿತಿಗತಿಗಳೇನು, ಇವರು ಮಾಡಿದಂಥ ಕಾರ್ಯಗಳನ್ನು ಯಾವ ಆಧಾರವಿಟ್ಟುಕೊಂಡು ಅಳತೆ ಮಾಡಿದ್ದಾರೆ, ಕೇವಲ ಒಂದೇ ವರ್ಗದ ಅಧಿಕಾರಿಗಳನ್ನು ಇದರಲ್ಲಿ ಇಟ್ಟುಕೊಳ್ಳಬೇಕೆಂಬ ದೃಷ್ಟಿಯಿಂದ ಇಂತಹ ಅನ್ಯಾಯ ನಡೆದಿದೆ ಎನ್ನುವುದನ್ನು ಮಾನ್ಯ ಸರ್ಕಾರ ಗಮನಿಸಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಮಾನ್ಯ ಸದಸ್ಯರ ಪ್ರಶ್ನೆ 3-4 ಉಪಪ್ರಶ್ನೆಗಳನ್ನೊಳಗೊಂಡಿವೆ. ಅವರು ರಿವರ್ಟ್ ಆದಮೇಲೆ ಅವರವರ ಪೊದಲಿನ ಹುದ್ದೆಗಳಿಗೆ ಹೋಗುತ್ತಿದ್ದಾರೆ. ಪ್ರತಿವರ್ಷವೂ ಅವರ ವಿಚಾರದಲ್ಲಿ ವರದಿಗಳನ್ನು ತರಿಸಿಕೊಂಡಿದ್ದೇವೆ. ಅವರು ಸಿ.ಡಿ. ಮತ್ತು ಎನ್.ಇ.ಎಸ್. ಬ್ಲಾಕ್‌ಗಳಲ್ಲಿ ಕೆಲಸ ಮಾಡುತ್ತಿರುವಾಗ ಅವರ ಒಂದು ಆಪ್ಟಿಟ್ಯೂಡ್ ಕೂಡ ಗಮನಿಸಲಾಗಿದೆ. ಈಗ ಮುಖ್ಯವಾಗಿ ಅಧಿಕಾರವರ್ಗಕ್ಕೆ ಬೇಕಾದ್ದು ಅವರ ಒಂದು ಕಾರ್ಯೋತ್ಸಾಹ ಮತ್ತು ಆಸಕ್ತಿ. ನಾನ್‌ಪ್ಲಾನ್ ಮತ್ತು ಪ್ಲಾನ್ ಸ್ಕೀಮುಗಳು ಯಶಸ್ವಿಯಾಗಬೇಕಾದರೆ ಅಂತಹ ಅಧಿಕಾರಿಗಳಿರು ವುದು ಅವಶ್ಯಕ. ಆದರೆ ನಾನ್ ಪ್ಲಾನ್ ಸ್ಕೀಮ್ಸ್ ಇದುವರೆಗೂ ಅಷ್ಟಾಗಿ ಪ್ರತಿಫಲವನ್ನು ತಂದಿಲ್ಲ ವೆಂಬುದಾಗಿ ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ. ಇದನ್ನು ಈ ಮಾನ್ಯ ಸಭೆಯುಲ್ಲೂ

(ಶ್ರೀ ಕೊಂಡಜ್ಜಿ ಬಸಪ್ಪ)

ಹಾಗೂ ರೋಕ ನಭೆಯಲ್ಲೂ ಹೇಳುತ್ತಾ ಇದ್ದಾರೆ. ಒಟ್ಟಿನಲ್ಲಿ ನಿಜವಾಗಿ ಈ ಅಧಿಕಾರಿವರ್ಗದವರು ನರಿಯಾಗಿ ಕೆಲಸ ಮಾಡುತ್ತಿದ್ದಾರೆಯೇ ಎಂಬ ದೃಷ್ಟಿಯಿಂದ ಸ್ಕ್ರೂನಿಂಗ್ ಕಮಿಟಿಯನ್ನು ಏರ್ಪಾಡು ಮಾಡಿ ಆಯಾ ಡಿವಿಜನ್ನುಗಳಿಗೆ ಹೋಗಿ ಅವರನ್ನು ಅಲ್ಲಲ್ಲಿಯೇ ಇಂಟರ್‌ವ್ಯೂ ಮಾಡಿ ಸಂಬಂಧಪಟ್ಟ ಡೆಪ್ಯುಟಿ ಕಮಿಷನರ್ ಹಾಗೂ ಡಿವಿಜನರ್ ಕಮಿಷನರ್ ಅವರಿಂದ ವರದಿ ತರಿಸಿಕೊಂಡು ಅಖೈರು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಡಿ. ಎಂ. ಸಿದ್ದಯ್ಯ.—ಈ 6ಜನ ಬಿ.ಡಿ.ಓ.ಗಳು ಮತ್ತು 3 ಜನ ಡೆಪ್ಯುಟಿ ಬಿ.ಡಿ.ಓ. ಗಳು ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ? ಸ್ಕ್ರೂನಿಂಗ್ ಕಮಿಟಿಯವರು ಅವರ ಕೆಲಸದ ಕಾರಾವಧಿಯಲ್ಲಿ ಆ ಅಧಿಕಾರಿಗಳು ಅನರ್ಹರು ಎಂದು ಹೇಳುವುದಕ್ಕೆ ಇರತಕ್ಕ ಕಾರಣಗಳೇನು ?

Sri KONDAJJI BASAPPA.—The B.D.O., Davanagere, was appointed on 26-4-61 the B D.O., Sandur, was appointed on 22-4-61; another B.D.O. was appointed on 29-4-61; another was appointed on 17-4.61; another was appointed on 21-4-61 and another was appointed on 22-4-62. Two Deputy B-D.Os were appointed on 28-12-61 and another was appointed on 11-4-62. They were under training from 1-1-62 to 31-12-64.

ಶ್ರೀ ಎಚ್. ಡಿ. ದೇವೇಗೌಡ.—ಸ್ಕ್ರೂನಿಂಗ್ ಕಮಿಟಿಯವರು ಏನು ಸರ್ಕಾರಕ್ಕೆ ವರದಿ ಕಳುಹಿಸಿದ್ದಾರೋ ಅದರ ಮೇಲೆ ಅವರನ್ನು ಹಿಂದಿನ ಕೆಲಸಕ್ಕೆ ಕಳುಹಿಸಿದ್ದು ಸರಿ. ಹಾಗಾದರೆ ಬಿ.ಡಿ,ಓ. ಗಳು ಕೆಲಸಕ್ಕೆ ಸೇರಿದರಲಾಗಾಯಿತು ಸ್ಕ್ರೀನಿಂಗ್ ಕಮಿಟಿಯವರು ಈ ಅಧಿಕಾರಿಗಳ ಮೇಲೆ ಜಿಲ್ಲಾಧಿಕಾರಿಗಳು ಕಳುಹಿಸಿದಂಥ ವರದಿಯನ್ನು ಗಮನಕ್ಕೆ ತೆಗೆದುಕೊಂಡಿದ್ದಾರೆಯೋ ?

ಶ್ರೀ ಕೊಂಡಜ್ಜಿ ಬಸಪ್ಪ.—ಜಿಲ್ಲಾಧಿಕಾರಿಗಳ ವರದಿ ಡಿವಿಜನರ್ ಕಮಿಷನರ್ ವರದಿ ಇವೆಲ್ಲ ವನ್ನು ಅಸೆಸ್ ಮಾಡಿ ಒಂದು ವರದಿಯನ್ನು ಕಳುಹಿಸಿದ್ದೇವೆ ಅದನ್ನೂ ಸಹ ಸ್ಕ್ರೂನಿಂಗ್ ಕಮಿಟಿಯ ವರು ಗಮನಕ್ಕೆ ತೆಗೆದುಕೊಂಡಿದ್ದಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಕೆಲವು ಡೆವಲಪ್‌ಮೆಂಟ್ ಬ್ಲಾಕುಗಳಲ್ಲಿ ಈ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲವೆಂದು ನಾನೇ ಇಲ್ಲಿ ಹೇಳಿರುವಾಗ ಸ್ಕ್ರೂನಿಂಗ್ ಕಮಿಟಿಯವರು ಮಾಡಿರತಕ್ಕ ವರದಿಯನ್ನು ಸರ್ಕಾರ ಪರಿಶೀಲನೆ ಮಾಡಿ ಅವರಮೇಲೆ ಸರಿಯಾದ ಅಭಿಪ್ರಾಯ ಏಲ್ಲದೇ ಇದ್ದ ಪಕ್ಷದಲ್ಲಿ ಅವರನ್ನು ಮನೆಗೆ ಕಳುಹಿಸುವುದು ನ್ಯಾಯವಲ್ಲವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಅವರು ಪ್ರೊಬೇಷನರಿ ಪೀರಿಯಡ್‌ನಲ್ಲಿರುವುದರಿಂದ ಈಗ ಒರಿಜ ನರ್ ಪ್ಲೇಸಿಗೆ ರಿವರ್ಟ್ ಆಗುತ್ತಿದ್ದಾರೆ. ಡೈರೆಕ್ಟಾಗಿ ಸೆಲೆಕ್ಟ್ ಮಾಡಿದ್ದರೆ ಅವರು ಮನೆಗೆ ಹೋಗುತ್ತಾರೆ.

ಶ್ರೀ ಅಂದಾನಯ್ಯ.—ಈಗಿರತಕ್ಕ ಬಿ.ಡಿ.ಓ.ಗಳಿಗೆ ನಾಕಷ್ಟು ಕೆಲಸವಿಲ್ಲದೇ ಇರುವಾಗ ಡೆಪ್ಯುಟಿ ಬಿ.ಡಿ.ಓ. ಗಳನ್ನು ತೆಗೆಯುವುದಕ್ಕೆ ಸರ್ಕಾರದವರು ಪರಿಶೀಲನೆ ಮಾಡಿದ್ದಾರೆಯೋ ?

ಶ್ರೀ ಕೊಂಡಜ್ಜಿ ಬಸಪ್ಪ.—ಸರ್ಕಾರ ಆ ವಿಚಾರವನ್ನು ಪರಿಶೀಲಿಸಿದೆ.

ಶ್ರೀ ಎ. ಎಸ್. ಪಾಟೀಲ್.—ಪ್ಲೇ-ಆರ್ಡರ್ ಕೊಟ್ಟರೂ ಅದನ್ನೂ ಮಂತ್ರಿಗಳು ಜಾರಿಗೆ ತರಲಲ್ಲ ಕಾರಣವೇನು ?

ಶ್ರೀ ಕೊಂಡಜ್ಜಿ ಬಸಪ್ಪ.—ಸರ್ಕಾರ ಪರಿಶೀಲನೆ ಮಾಡುವ ಸಂದರ್ಭಗಳು ಇವೆ. ಒಂದು ಸಾರಿ ಸರ್ಕಾರೀ ಆಜ್ಞೆ ಮಾಡಿದಮೇಲೆ ಪುನಃ ಅದನ್ನು ರಿವ್ಯೂ ಮಾಡಬಹುದೇ ಎಂಬ ಪ್ರಶ್ನೆಯನ್ನು ವಿಮರ್ಶೆ ಮಾಡುತ್ತಿದ್ದೆವೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಈ ವಿಚಾರವನ್ನು ಪರಿಶೀಲನೆ ಮಾಡಿ ದ್ದಾರೋ ಇಲ್ಲವೋ ?

Sri KONDAJJI BASAPPA.—It is a suggestion for consideration.

ಶ್ರೀ ಎಸ್. ಸುಬ್ಬಯ್ಯನಾಯಕ್.—ಇನ್ನು ಕೆಲವರು ಬಿ.ಡಿ.ಓ. ಗಳ ಹೆಸರುಗಳ ಬಗ್ಗೆ ವರದಿ ಬಂದಿದ್ದರೂ ಅವರ ಬಗ್ಗೆ ತೀರ್ಮಾನವನ್ನು ಇನ್ನೂ ತೆಗೆದುಕೊಳ್ಳದೇ ಇರುವುದರಿಂದ ಅವರ ವೇತನ ವನ್ನು ತಡೆಹಿಡಿದಿರುವುದಕ್ಕಾಗಿ ಅವರಿಗೆ ತೊಂದರೆಯಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಯಾರ್ಯಾರ ಮೇಲೆ ಅಡ್‌ವರ್ಸ್ ವರದಿ ಬಂದಿದೆಯೋ ಅವರನ್ನು ಸ್ಕ್ರೂನಿಂಗ್ ಕಮಿಟಿಯವರು ಇಂಟರ್‌ವ್ಯೂ ಮಾಡಿ ಒಂದು ತೀರ್ಮಾನವನ್ನು ಕೈಗೊಂಡಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಬಿ. ಡಿ. ಓ. ಗಳ ಪೈಕಿ ಒಬ್ಬರು ಮಹಿಳಾ ಬಿ.ಡಿ.ಓ. ಇರುವುದರಿಂದ ಅವರಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ? ಮತ್ತು ಅವರಿಗೆ ಏನು ಸೌಲಭ್ಯಗಳನ್ನು ಒದಗಿಸಿದ್ದಾರೆ?

ಶ್ರೀ ಕೊಂಡಜ್ಜಿ ಬಸಪ್ಪ.—ಈಗ ರಿವರ್ಟ್ ಆಗಿರುವವರಲ್ಲಿ ಯಾರೂ ಮಹಿಳಾ ಬಿ.ಡಿ.ಓ. ಇಲ್ಲ.

ಶ್ರೀ ಕೆ. ಲಕ್ಕಪ್ಪ.—ಈ ರಾಜ್ಯದಲ್ಲಿ ಎಸ್. ಕೆ. ಡೇ ಅವರು ತಂದಿರತಕ್ಕ ಎನ್. ಇ. ಎಸ್. ಸ್ಕೀಂ ಯಶಸ್ವಿಯಾಗದೆ ಇರುವುದರಿಂದ ಆ ಸ್ಕೀಂನಲ್ಲಿ ಕೆಲಸ ಮಾಡುತ್ತಿರುವ ರಾಷ್ಟ್ರೀಯ ವಿಸ್ತರಣಾ ಯೋಜನಾ ಅಧಿಕಾರಿಗಳ ಹುದ್ದೆಗಳನ್ನು ಈ ಯೋಜನೆಯಿಂದ ತೆಗೆಯುವುದಕ್ಕೆ ಈ ಸರ್ಕಾರ ಆಲೋಚನೆ ಮಾಡಿದೆಯೇ?

ಶ್ರೀ ಕೊಂಡಜ್ಜಿ ಬಸಪ್ಪ.—ಯಶಸ್ವಿಯಾಗಿಲ್ಲ ಎನ್ನುವ ಅಭಿಪ್ರಾಯ ಸರಿಯಲ್ಲ. ಏಕೆಂದರೆ, ರಾಷ್ಟ್ರೀಯ ವಿಸ್ತರಣಾ ಯೋಜನೆಯ ಉದ್ದೇಶ ಹಳ್ಳಿಗಳಲ್ಲಿನ ಜನರ ಆರ್ಥಿಕಸ್ಥಿತಿ ಸುಧಾರಿಸಲು ಮತ್ತು ಸಮಾಜ ವಿಕಾಸ ಮಾಡಲು ತೆಗೆದುಕೊಂಡ ಕಾರ್ಯ. ಆದರೆ ಅಲ್ಲಿ ನಾವು ಇವತ್ತು ನಿರೀಕ್ಷಣೆ ಮಾಡಿದಷ್ಟು ಕೆಲಸ ನಡೆಯದೇ ಇರಬಹುದು. ಆ ಸಮಾಜದಲ್ಲಿ ಹೆಚ್ಚು ಕೆಲಸವನ್ನು ಅವರು ಮಾಡುತ್ತಿದ್ದಾರೆಂದು ನಾವು ತಿಳಿದುಕೊಂಡಿದ್ದೇವೆ. ಇದು ಬಹಳ ಕಷ್ಟವಾದ ಕೆಲಸ. ಮೊನ್ನೆ ಕೊ-ಆಪರೇಟಿವ್ ಸೆಕ್ಟರಿನಲ್ಲಿ ಅನೇಕ ಲೋಪ ದೋಷಗಳನ್ನು ಇಟ್ಟಿದ್ದಾರೆ. ಅವೆಲ್ಲ ತಮ್ಮಂತಹ ಸಾರ್ವಜನಿಕರೆಲ್ಲರೂ ಮಾಡುವ ಕೆಲಸ. ಇದು ಬಹಳ ದೊಡ್ಡದಾದ ಕೆಲಸ. ಇಂತಹ ಕೆಲಸವನ್ನು ನಾವೂ ಮಾನ್ಯ ಸದಸ್ಯರೂ ಎಲ್ಲರೂ ಸೇರಿ ಮಾಡಿದರೆ. ಈ ಯೋಜನೆ ಜಯಪ್ರದವಾಗುತ್ತದೆ. ಬರೀ ವಿಸ್ತರಣಾ ಅಧಿಕಾರಿಗಳು ಮಾತ್ರ ಈ ಕೆಲಸ ಮಾಡತಕ್ಕವರೆಂದು ತಿಳಿದುಕೊಂಡರೆ ಅದು ಮಾನ್ಯ ಸದಸ್ಯರ ತಪ್ಪು ಭಾವನೆಯೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ಮಹಿಳಾ ಬಿ.ಡಿ.ಓ. ರಿವರ್ಟ್ ಆಗಿರುವುದು ನಿಜವೇ?

ಶ್ರೀ ಕೊಂಡಜ್ಜಿ ಬಸಪ್ಪ.—ಮಹಿಳಾ ಬಿ.ಡಿ.ಓ. ಅಲ್ಲಿ ಯಾರೂ ಇಲ್ಲ.

ಶ್ರೀ ಕೆ. ಲಕ್ಕಪ್ಪ.—ಸಮಾಜ ವಿಕಾಸ ಯೋಜನೆ ಬಹಳ ದೊಡ್ಡದು, ರೈತರ ಪ್ರತಿನಿಧಿಯಾಗಿ ಬಂದಿರತಕ್ಕವರು ಇದನ್ನು ಬೇಡ ಎಂದು ಹೇಳುವಾಗ ಈಗಲಾದರೂ ಆ ಯೋಜನೆಯನ್ನು ನಿಲ್ಲಿಸುತ್ತಾರೆಯೇ?

ಶ್ರೀ ಕೊಂಡಜ್ಜಿ ಬಸಪ್ಪ.—ಸದಸ್ಯರ ಅಭಿಪ್ರಾಯ ಆ ರೀತಿ ಇರಬಹುದು.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಮುಖ್ಯ ಮಂತ್ರಿಗಳು ಮಾಡಿದ ಸ್ಪೇ-ಆರ್ಡರ್‌ಗೆ ಈ ರೀತಿ ಮಾಡಿದರೆ ನಮ್ಮಂತಹ ಮಾನ್ಯ ಸದಸ್ಯರ ಗತಿಯೇನು?

Mr. SPEAKER.—How does it arise?

ಶ್ರೀ ಡಿ. ಎಂ. ಸಿದ್ದಯ್ಯ.—ತಮ್ಮ ಉತ್ತರದ ಪ್ರಕಾರ ಒಬ್ಬ ಡೆಪ್ಯುಟಿ ಬಿ.ಡಿ.ಓ. ಬಿಟ್ಟು ಮಿಕ್ಕ ವರೆಲ್ಲರನ್ನು 1961 ರಲ್ಲಿ ನೇಮಕ ಮಾಡಿರುವುದರಿಂದ ಸುಮಾರು 4 ವರ್ಷಗಳ ತನಕ ಅವರು ಮಾಡಿದಂಥ ಕೆಲಸದಮೇಲೆ ಏನೂ ವರದಿ ತರಿಸದೆಯೇ ಈಗ ಯಾವ ಒಂದು ಆಧಾರದಮೇಲೆ ಅವರನ್ನು ಸರ್ಕಾರದವರು ರಿವರ್ಟ್ ಮಾಡಿದ್ದಾರೆ?

ಶ್ರೀ ಕೊಂಡಜ್ಜಿ ಬಸಪ್ಪ.—ಹಿಂದೆ ಹೇಳಿದ ಉತ್ತರವನ್ನೇ ಪುನಃ ಹೇಳಬೇಕಾಗಿದೆ. ಆ ಅಧಿಕಾರ ವರ್ಗದವರಿಗೆ ಸಾಕಷ್ಟು Aptitude Enthusiasm Zeal ಇರಬೇಕು. ಒಂದು ವೇಳೆ ಸಾಕಾದಷ್ಟು ಪ್ರೊಗ್ರೆಸ್ ನಡೆದಿಲ್ಲವೆಂದು ಸಾರ್ವಜನಿಕರು ಹೇಳುತ್ತಿದ್ದರೆ ಅಂತಹ ಸಂದರ್ಭಗಳಲ್ಲಿ ಅವರೆಲ್ಲರ ಕೆಲಸದ ಬಗ್ಗೆ ಬೇಕಾದ ಅನಕ್ತ ಉತ್ಸಾಹ ಶ್ರದ್ಧೆ ಇವೆಲ್ಲವನ್ನೂ ಪರಿಗಣನೆಗೆ ತೆಗೆದು ಕೊಂಡು ಜಿಲ್ಲಾಧಿಕಾರಿಗಳು ಹಾಗೂ ಡಿವಿಜನಲ್ ಕಮಿಷನರ್ ಅವರು ಸರ್ಕಾರಕ್ಕೆ ಒಂದು ವರದಿ ಕಳುಹಿಸುತ್ತಾರೆ. ಎಲ್ಲವನ್ನೂ ಸಂಗ್ರಹಿಸಿ ಕಳುಹಿಸಿದಂಥ ವರದಿಯ ಆಧಾರದಮೇಲೆ ಇವರೆಲ್ಲರನ್ನು ರಿವರ್ಟ್ ಮಾಡಿದ್ದೇವೆ.

9-30 A.M.

ಶ್ರೀ ಸಿ. ಆರ್. ರಂಗೇಗೌಡ.—ಈಗ ತಾವು 9 ಜನ ಅಧಿಕಾರಿಗಳನ್ನು ದಕ್ಷತೆಯ ಅಭಾವದಿಂದ ರಿವರ್ಟ್ ಮಾಡಿದ್ದೇವೆಂದು ಹೇಳಿದ್ದೀರಿ. ಆ ಅಧಿಕಾರಿಗಳೆಲ್ಲರೂ ಹೊಸ ಮೈಸೂರಿನಿಂದ ಬಂದಿರತಕ್ಕವರಾಗಿದ್ದಾರೆಂಬುದು ಸರ್ಕಾರದವರಿಗೆ ಗೊತ್ತಿದೆಯೇ?

ಶ್ರೀ ಕೊಂಡಜ್ಜಿ ಬಸಪ್ಪ.—ಅದರಲ್ಲಿ ಹಳೆಯ ಮೈಸೂರಿನವರೂ ಇದ್ದಾರೆ, ಹೊಸ ಮೈಸೂರಿನವರೂ ಇದ್ದಾರೆ.

ಶ್ರೀ ಎ. ಎಸ್. ಪಾಟೀಲ್.—ಸ್ಕ್ರೀನಿಂಗ್ ಮಾಡುವ ಪದ್ಧತಿಯನ್ನು ಡೆವಲಪ್‌ಮೆಂಟ್ ಇಲಾಖೆಯಲ್ಲ ಮಾತ್ರ ಜಾರಿಗೆ ತಂದಿದ್ದೀರೋ ಅಥವಾ ಉಳಿದ ಎಲ್ಲಾ ಇಲಾಖೆಗಳಲ್ಲಿಯೂ ಇದನ್ನು ಜಾರಿಗೆ ತಂದಿದ್ದೀರೋ ಹೇಗೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಈ ಡೆವಲಪ್‌ಮೆಂಟ್ ಇಲಾಖೆಯಲ್ಲಿ ಇದರ ಅವಶ್ಯಕತೆ ಕಂಡುಬಂತು ಅದಕ್ಕೋಸ್ಕರ ಇಲ್ಲಿ ಸ್ಕ್ರೀನಿಂಗ್ ಕಮಿಟಿಯನ್ನು ನೇಮಿಸಿದ್ದೇವೆ. ಯಾವ ಯಾವ ಇಲಾಖೆಯಲ್ಲಿ ಇದರ ಅವಶ್ಯಕತೆ ಕಂಡುಬರುತ್ತದೆಯೋ ಅಲ್ಲೆಲ್ಲಾ ಸ್ಕ್ರೀನಿಂಗ್ ಕಮಿಟಿಯನ್ನು ನೇಮಿಸುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡ.—ಈಗ ರಿವರ್ಟ್ ಮಾಡಿರತಕ್ಕ 9 ಜನ ಅಧಿಕಾರಿಗಳವರ ಅಪ್ಟಿಟ್ಯೂಡ್ ಜೀರ್ ಮತ್ತು ಎಂತೂಜಿಯಾಜಮ್ಮಂ ಇವುಗಳನ್ನು ಪರೀಕ್ಷೆ ಮಾಡಿ ಅವರನ್ನು ರಿವರ್ಟ್ ಮಾಡಿದ್ದೇವೆ. ಎಂದು ಹೇಳಿದಿರಿ, ಹಾಗಾದರೆ, ಉಳಿದ ಆಫೀಸರುಗಳಿಗೆಲ್ಲರಿಗೂ ಅಪ್ಟಿಟ್ಯೂಡ್, ಜೀರ್ ಮತ್ತು ಎಂತೂಜಿಯಾಜಮ್ ಇವುಗಳು ಇದೆಯೆಂದು ಸರ್ಕಾರದವರ ಅಭಿಪ್ರಾಯವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಅವರ ವಿಷಯದಲ್ಲಿ ಅಂಥಾ ಯಾವ ಅಡ್ವರ್ಸ್ ರಿಪೋರ್ಟು ಬಂದಿಲ್ಲ, ಅವರಲ್ಲಿ ಸಾಕಷ್ಟು ಅಪ್ಟಿಟ್ಯೂಡ್, ಮತ್ತು ಎಂತೂಜಿಯಾಜಮ್ ಇವುಗಳು ಇವೆಯೆಂದು ಗೊತ್ತಾಗಿದೆ. ಆದ್ದರಿಂದ ಅವರನ್ನು ರಿವರ್ಟ್ ಮಾಡಿಲ್ಲ.

ಶ್ರೀಮತಿ ರತ್ನಮ್ಮ ಮಾಧವರಾವ್.—ಒಬ್ಬರು ಲೇಡಿ ಬಿ. ಡಿ. ಒ. ಅವರನ್ನು ರಿವರ್ಟ್ ಮಾಡಿರುವುದು ನಿಜವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಈಗ ಇತ್ತೀಚೆಗೆ ಸ್ಕ್ರೀನಿಂಗ್ ಸಮಿತಿಯವರ ಶಿಫಾರಸ್ಸಿನ ಮೇರೆಗೆ 9 ಜನಗಳನ್ನು ಮಾತ್ರ ರಿವರ್ಟ್ ಮಾಡಿದೆ. ಆ ಪೈಕಿ ಲೇಡಿ ಬಿ. ಡಿ. ಒ. ಯಾರೂ ಇಲ್ಲ. ಈ ಸ್ಕ್ರೀನಿಂಗ್ ಕಮಿಟಿಯವರನ್ನು ನೇಮಕ ಮಾಡುವುದಕ್ಕೆ ಮುಂಚೆ ಏನಾದರೂ ಆದು ನಡೆದಿರಬಹುದೋ ಏನೋ ಗೊತ್ತಿಲ್ಲ.

Mr. SPEAKER.—With regard to question No. 68 by hon'ble member Sri T. Madiah Gowda, I am holding it over because the hon'ble Minister was not present at the moment. Then as regards the Question for which a supplementary has been handed on to, I am holding on that Question also. I am passing on the supplementary to the Hon'ble Minister.

Question Hour is over.

QUESTIONS FOR ANSWERS ON THE DAY

(but not taken up)

Putting up of Railway Lines.

*Q.—334. **Sri GANJI VEERAPPA** (Harihar).—

Will the Government be pleased to state :—

(*a*) whether they have sent up a proposal to the Union Government to put up a railway line between (i) Hosadurga Road and Rayadurga *via* Mathodu-Hiriyur and Challakere (ii) between Harihar and Kottur;